4(ಈ) ಅಡಿಯಲ್ಲಿ ನಮೂದಿಸಿದಂತೆ ಒಂದನೇ ತರಗತಿಯಿಂದ ತೇರ್ಗಡೆ ಹೊಂದಿ ಕನಿಷ್ಟ ಎಂಟನೇ ತರಗತಿಯವರೆಗೆ ವ್ಯಾಸಂಗ ಮಾಡಬೇಕು ಎಂಬ ಷರತ್ತನ್ನು ಭಾಗಶಃ ಮಾರ್ಪಡಿಸಿ ದಿನಾಂಕ: 09.09.2014ರ ಆದೇಶದಲ್ಲಿ ಅಂಗವಿಕಲ ಮತ್ತು ಬುದ್ದಿಮಾಂದ್ಯ ಮಕ್ಕಳಿಗೆ ಮಾತ್ರ 1 ರಿಂದ 5ನೇ ತರಗತಿಯವರೆಗೆ ವ್ಯಾಸಂಗ ಮಾಡಿರಬೇಕೆಂದು, ಒಂದು ವೇಳೆ ವಿಕಲಚೇತನ ಮಕ್ಕಳು ತೀವ್ರತರವಾದ ವಿಕಲತೆಯಿಂದ ಬಳಲುತ್ತಿದ್ದಲ್ಲಿ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು ಪ್ರತಿ ಪ್ರಕರಣಗಳ ಸಾಧಕ–ಬಾಧಕಗಳನ್ನು ಪರಿಶೀಲಿಸಿ ಈ ಷರತ್ತನ್ನು ಸಹ ಸಡಿಲಿಸಲು ಅಧಿಕಾರ ನೀಡಿ ಆದೇಶಿಸಿದೆ.

3. ಯೋಜನೆಯ ಅನುಷ್ಠಾನದ ಹಿತದೃಷ್ಟಿಯಿಂದ ಅಗತ್ಯಕ್ಕೆ ತಕ್ಕಂತೆ ಮಾರ್ಗಸೂಚಿಗಳನ್ನು ಸರಳೀಕರಣಗೊಳಿಸಲಾಗುತ್ತಿದೆ.

ವೃತ್ತಿಪರ ಶಿಕ್ಷಣ ಕಾಯ್ದೆ

1318(1199); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) 2006ರ ವೃತ್ತಿಪರ ಶಿಕ್ಷಣ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:

ಆ) ಹಾಗಿದ್ದಲ್ಲಿ, ಯಾವ ರೀತಿಯ ತಿದ್ದುಪಡಿಯನ್ನು ಈ ಕಾಯ್ದೆಗೆ ತರಲಾಗುವುದು:

ಇ) ಪ್ರಸ್ತಾಪಿತ ತಿದ್ದುಪಡಿಯನ್ನು ಯಾವಾಗ ಜಾರಿಗೆ ತರಲಾಗುವುದು; (ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು)

ಅ) ಇದೆ

ಆ) ಪರಿಶೀಲನೆಯಲ್ಲಿದೆ

ಇ) 2015–16ನೇ ಶೈಕ್ಷಣಿಕ ಸಾಲಿನಿಂದ ಕಾಯ್ದೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿರುತ್ತದೆ. ಅದರೊಂದಿಗೆ ಅವಶ್ಯ ತಿದ್ದುಪಡಿಗಳನ್ನು ತರುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

1319(1856); ಶ್ರೀ ಅರವಿಂದ್ ಚಂದ್ರಕಾಂತ್ ಪಾಟೀಲ್

ಅ) ರಾಜ್ಯದ ಅನುದಾನಿತ ಪ್ರೌಢ ಶಾಲೆಗಳಲ್ಲಿ ದಿನಾಂಕ: 02–02–2000 ಪೂರ್ವದಲ್ಲಿ ಖಾಲಿ ಇರುವ ಚಿತ್ರಕಲಾ ವೃತ್ತಿ ಶಿಕ್ಷಕರನ್ನು ಭರ್ತಿ ಮಾಡಲು ಅವಕಾಶ ಇದೆಯೇ; ಸರ್ಕಾರದ ಆದೇಶ ಪ್ರತಿ ನೀಡುವುದು;

ಆ) ರಾಜ್ಯದ ಅನುದಾನಿತ ಪ್ರೌಢ ಹಾಗೂ ಸರ್ಕಾರಿ ಶಾಲೆಗಳಲ್ಲಿ ದಿನಾಂಕ: 02–02–2000ರ ನಂತರ ಖಾಲಿ ಆಗಿರುವ ಚಿತ್ರಕಲಾ ವೃತ್ತಿ ಶಿಕ್ಷಕರನ್ನು ಭರ್ತಿ ಮಾಡಲು ಅವಕಾಶ ಇದೆಯೇ; ಇದ್ದಲ್ಲಿ ಸರ್ಕಾರದ ಆದೇಶ ಒದಗಿಸುವುದು;

ಇ) ಒಂದು ವೇಳೆ ಈ ಹುದ್ದೆಗಳ ಭರ್ತಿ ಮಾಡಲು ಅವಕಾಶ ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಈ) ರಾಜ್ಯದ ಅನುದಾನಿತ ಪ್ರೌಢ ಶಾಲೆಗಳಲ್ಲಿ ದಿನಾಂಕ: 02–02–2000 ಪೂರ್ವದಲ್ಲಿ ಹಾಗೂ ಈ ದಿನಾಂಕದ ನಂತರ ಖಾಲಿ ಇರುವ ಚಿತ್ರಕಲಾ ವೃತ್ತಿ ಹುದ್ದೆಗಳ ಸಂಖ್ಯೆ ಎಷ್ಟು (ಪ್ರತ್ಯೇಕ ವಿವರ ನೀಡುವುದು);

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ದಿನಾಂಕ : 02–02–2000ರ ಪೂರ್ವದಲ್ಲಿ ಖಾಲಿ ಇರುವ ಚಿತ್ರಕಲಾ, ವೃತ್ತಿ ಶಿಕ್ಷಕರುಗಳನ್ನು ದಿನಾಂಕ: 02–02–2000ರ ಒಳಗೆ ಭರ್ತಿ ಮಾಡಿಕೊಂಡಿದ್ದಲ್ಲಿ ಮಾತ್ರ ಅನುದಾನಕ್ಕೆ ಒಳಪಡಿಸಲು ಅವಕಾಶವಿದೆ (ಆದೇಶದ ಪ್ರತಿ ಲಗತ್ತಿಸಿದೆ) ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 52 ವಿವಿದ 99ರ ದಿನಾಂಕ : 02–02–2000ರಲ್ಲಿ ಹೊಸ ಪ್ರೌಢಶಾಲಾ ಸಿಬ್ಬಂದಿ ಮಾದರಿ ರಚನೆ